**ಇಂದು ದಿನಾಂಕಃ 04-12-2023 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 1 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್.ಕೆ. ವಕೀಲರಿಂದಃ-**

ನನ್ನ ಮಾವನ ಹೆಸರು ಹರಿಶಂಕರ ತಂದೆ ಶಂಕರಪ್ಪ. ಹರಿಶಂಕರವರಿಗೆ 3 ಜನ ಅಣ್ಣ ತಮ್ಮಂದಿರು. ಅವರಲ್ಲಿ ದೊಡ್ಡವರು ನಂದಿಕುಮಾರ, 2 ನೇ ಅವರು ಶಿವಶಂಕರ ಮತ್ತು 3 ನೇ ಅವರು ಹರಿಶಂಕರ ಇರುತ್ತಾರೆ. ಅವರಲ್ಲಿ ನನ್ನ ಮಾವ ಚಿಕ್ಕವರು ಎಂದರೆ ಸರಿ. ಪಾಲ

ಮಾಡುವುದಕ್ಕಿಂತ ಮುಂಚೆ ಸ.ನಂ. 18 ರಲ್ಲಿ 69 ಎಕರೆ ಜಮೀನು ಇತ್ತು ಎಂದರೆ ಸರಿ. ನಾನು ಮದುವೆ ಮಾಡುವುದಕ್ಕಿಂತ ಮೊದಲೇ ಪಾಲು ಆಗಿತ್ತು ಎಂದರೆ ಸರಿ. ಹೊಲದ ಫಲವತ್ತತ್ತೆಯ ಆಧಾರ ಮೇಲೆ ಪಾಲು ಮಾಡಿಕೊಂಡಿದ್ದಾರೆ ಎಂದರೆ ಸರಿ. ಅವಾಗ ಮೂರು ಪಾಲು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಮಾವನವರಿಗೆ ಫಲವತ್ತತೆಯಿಂದ ಕೂಡಿದ 18 ಎಕರೆ ಜಮೀನು ನೀಡಿದ್ದಾರೆ ಎಂದರೆ ಸಾಕ್ಷಿ ಪ್ರತಿಯೊಬ್ಬರಿಗೂ 23 ಎಕರೆ ಜಮೀನು ಬಂದಿರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ನಂದಿಕುಮಾರ ಮತ್ತು ಶಿವಕುಮಾರರವರಿಗೆ 20 ಎಕರೆ ಮತ್ತು 31 ಎಕರೆ ಜಮೀನು ಪಾಲಿನಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ಹಂಚಿಕೊಂಡಿರುವ ಬಗ್ಗೆ ನನಗಿಂತ ಜಾಸ್ತಿ ನನ್ನ ಮಾವನವರಿಗೆ ಗೊತ್ತಿರುತ್ತದೆ ಎಂದರೆ ನನ್ನ ಮಾವ ಹುಚ್ಚನಿದ್ದು ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಮಾವ ಹುಚ್ಚನಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಮಾನಸಿಕ ರೋಗಿ ಎಂದು ನುಡಿಯುತ್ತಾರೆ. ನನ್ನ ಮಾವ ಮಾನಸಿಕ ರೋಗಿ ಇರುವ ಬಗ್ಗೆ ದಾಖಲೆಗಳನ್ನು ಹಾಕಿಲ್ಲ. ನನ್ನ ಮಾವ ಬಂದರೆ ನಿಜ ಹೇಳುತ್ತಾರೆ ಎಂದು ತಿಳಿದು ಅವರಿಗೆ ಊರಿನಿಂದ ಓಡಿಸಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ಮಾವ ಊರು ಬಿಟ್ಟು ಇವತ್ತಿನಿಂದ 1.5 ವರ್ಷಗಳು ಆಗಿವೆ. ಸಾಕ್ಷಿ ಮುಂದುವರೆದು ದಾವೆ ಹುಡುವ ಸಮಯಕ್ಕೆ ನನ್ನ ಮಾವ ಇರಲಿಲ್ಲ ಎಂದು ನುಡಿಯುತ್ತಾರೆ. ಸಿ ಸಿ ಸಂಖ್ಯೆ 628/2015 ರಲ್ಲಿ ನನ್ನ ಮಾವ ಸಾಕ್ಷಿ ನೀಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 16-01-2018 ರಂದು ನನ್ನ ಮಾವ ನ್ಯಾಯಾಲಯದ ಮುಂದೆ ಬಂದು ಸಾಕ್ಷಿ ಹೇಳಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಾವನವರ ಹೇಳಿಕೆಯನ್ನು ಮರೆಮಾಚಲು ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನನ್ನ ಮಾವ ನಂದಿಕುಮಾರರವರಿಗೆ 31 ಎಕರೆ, ಶಿವಶಂಕರವರಿಗೆ 20 ಎಕರೆ ಮತ್ತು ನನ್ನ ಮಾವನಿಗೆ 18 ಎಕರೆ ಜಮೀನು ಬಂದಿದ್ದೆ ಎಂದು ಸಾಕ್ಷಿ ಹೇಳಿದ್ದಾರೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ದಾಖಲೆಯಲ್ಲಿ ಇರುವಂತೆ ನನ್ನ ಮಾವ ಶಂಕರರವರಿಗೆ ದಾವಾ ಆಸ್ತಿಯನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದರಲ್ಲಿರುವ ಸಹಿ ನನ್ನ ಮಾವನವರದು ಅಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ-1 ಗುರುತಿಸಲಾಯಿತು. (ಸದರಿ ದಾಖಲೆ ನೊಂದಣೆ ಇಲ್ಲದೆ ಇರುವ ಕಾರಣ ವಾದಿ ಪರ ವಕೀಲರು ತಮ್ಮ ತಕರಾರು ಇದೆ ಎಂದು ತಿಳಿಸಿರುತ್ತಾರೆ). ಈಗ ನೋಡುತ್ತಿರುವ ಸಿ ಸಿ 628/2015 ರ ಪ್ರಕರಣದಲ್ಲಿರುವ ಸಾಕ್ಷಿಯ ಹೇಳಿಕೆಯಲ್ಲಿರುವ ಸಹಿ ನನ್ನ ಮಾವನವರದು ಅಲ್ಲ. ಸದರಿ ಹೇಳಿಕಯನ್ನು ನಿಡಿ-2 ಎಂದು ಗುರುತಿಸಲಾಯಿತು. ( ನಿಡಿ-2 ನ್ನು ಗುರುತಿಸಲು ವಾದಿ ಪರ ವಕೀಲರು ತಮ್ಮ ತಕರಾರು ಇದೆ

ಎಂದು ತಿಳಿಸಿರುತ್ತಾರೆ).

ನನ್ನ ಮಾವನಾದ ಹರಿಶಂಕರರವರಿಗೆ 4 ಜನ ಮಕ್ಕಳು ಅವರ ಹೆಸರು ಶಂಕರಲಿಂಗ, ಸಂಜೀವ ಕುಮಾರ, ರಾಜಕುಮಾರ, ಗೀತಾ. ಸಂಜೀವ ಕುಮಾರ ನನ್ನ ಬಾವ. ನಿಡಿ-1 ರಲ್ಲಿರುವ ಸಹಿ ನನ್ನ ಬಾವರಾದ ಸಂಜೀವ ಕುಮಾರವರದ್ದು ಅಲ್ಲ. ನಿಡಿ-1 ರಲ್ಲಿರುವ ಸಹಿಯ ಬಗ್ಗೆ ಸಂಜೀವ ಕುಮಾರವರಿಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯ ಸಲ್ಲಿಸುವ ಕಾಲಕ್ಕೆ ನನ್ನ ಅತ್ತೆ ಜೀವಂತ ಇದ್ದರು ಸಹ ಅವರನ್ನು ಉದ್ದೇಶ ಪೂರ್ವಕವಾಗಿ ಕರೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆ ನ್ಯಾಯಲಯಕ್ಕೆ ಬರಬಹುದಾಗಿತ್ತು ಎಂದು ಪ್ರಶ್ನಿಸಿದಾಗ ಸಾಕ್ಷಿ ಅವರಿಗೆ ಕಣ್ಣಿನ ಕಾಯಿಲೆ ಆದ ಕಾರಣ ಆಗ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಗಂಡ ಮೃತಪಟ್ಟಿದಾರೆ ಎಂದರೆ ಸರಿ. ನನ್ನ ಗಂಡ 2019 ರಲ್ಲಿ ಮೃತಪಟ್ಟಿದ್ದಾರೆ. ನನ್ನ ಗಂಡ ಡಾಟಾ ಎಂಟ್ರಿ ಕೆಲಸ ಚಿಂಚೋಳಿಯಲ್ಲಿ ಮಾಡುತ್ತಿದ್ದರು. ನನ್ನ ಗಂಡ ತಹಶೀಲ್ದಾರವರ ಕಛೇರಿಯಲ್ಲಿ ಇದ್ದ ಕಾರಣ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ದಾಖಲೆಗಳನ್ನು ನನ್ನ ಮಾವನ ಹೆಸರಿನಲ್ಲಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಕರಣಕುಮಾರ ರವರ ವಿರುದ್ದ ಅಸಲು ದಾವೆ ಸಂಖ್ಯೆ 144/2022 ರಲ್ಲಿ ಕಂದಾಯ ದಾಖಲೆ ತಿದ್ದುಪಡೆಗಾಗಿ ದಾವೆಯನ್ನು ಹುಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ದಾವೆಯನ್ನು ಹುಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಯರ ವಿರುದ್ದ ಎರಡು ಕ್ರಿಮಿನಲ್ಲಿ ಪ್ರಕರಣವನ್ನು ಹುಡಿದ್ದೇನೆ. ಸಾಕ್ಷಿ ಮುಂದುವರೆದು ಅವರು ಸಹ ನನ್ನ ವಿರುದ್ದ ಎರಡು ಕ್ರಿಮಿನಲ್ಲಿ ಪ್ರಕರಣವನ್ನು ಹುಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರಿಗೆ ಖಬ್ಜಯಿಂದ ಬಿಡಿಸಲು ಸುಳ್ಳು ಪ್ರಕರಣವನ್ನು ಹುಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಹೆಣ್ಣುಮಕ್ಕಳು ಇದ್ದ ಕಾರಣ ಕಿರುಕುಳ ನೀಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಪಹಣ ನನ್ನ ಹೆಸರಿನಲ್ಲಿರುವುದನ್ನು ದುರುಪಯೋಗಿಸಿ ಸುಳ್ಳು ದಾವೆಯನ್ನು ಹುಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಾವನ ಹೆಸರಿನಲ್ಲಿ ದಾವಾ ಜಮೀನು ಬಿಟ್ಟು 3 ಜಮೀನುಗಳಿವೆ. 5 ಎಕರೆ 31 ಗುಂಟೆ, 8 ಎಕರೆ 1 ಗುಂಟೆ, ಮತ್ತು 5 ಎಕರೆ 15 ಗುಂಟೆ ಜಮೀನುಗಳು ನಮ್ಮ ಮಾವನ ಹೆಸರಿನಲ್ಲಿವೆ. ಸ.ನಂ. 18/1/4 ರಲ್ಲಿ 5 ಎಕರೆ 15 ಗುಂಟೆ ಜಮೀನು ನನ್ನ ಮಾವನ ಹೆಸರಿನಲ್ಲಿದೆ ಎಂದರೆ ಸರಿ. ಸ.ನಂ 18/4/1 ರಲ್ಲಿ 8 ಎಕರೆ ಜಮೀನು ನನ್ನ ಮಾವನ ಹೆಸರಿನಲ್ಲಿದೆ ಎಂದರೆ ಸರಿ. ಸ.ನಂ. 18/4/2 ರಲ್ಲಿ 5 ಎಕರೆ 30 ಗುಂಟೆ ಜಮೀನು ನನ್ನ ಮಾವನ ಹೆಸರಿನಲ್ಲಿದೆ ಎಂದರೆ ಸರಿ. ಈ 3 ಜಮೀನುಗಳಲ್ಲಿ ನಮ್ಮ ಹಾಗೂ ಪ್ರತಿವಾದಿಯ ಮಧ್ಯ ಜಗಳವಿಲ್ಲ. ದಾವಾ ಜಮೀನು ಪ್ರತಿವಾದಿಯರಿಗೆ ಬಂದಿದ್ದು ಪಹಣೆ ನನ್ನ ಹೆಸರಿನಲ್ಲಿ ಇದ್ದ ಕಾರಣ ಜಗಳ ಬಂದಿರುತ್ತದೆ ಎಂದರೆ

ಸರಿಯಲ್ಲ. ದಾವಾ ಜಮೀನು ಪ್ರತಿವಾದಿಯರು ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಆದ ಕಾರಣ ಪ್ರತಿವಾದಿಯರೇ ದಾವಾ ಜಮೀನಿನ ಮಾಲೀಕ ಮತ್ತು ಖಬ್ಜದಾರರು ಎಂದರೆ ಸರಿಯಲ್ಲ. ಈ ದಾವೆ ಮುಗಿಯುವರೆಗೆ ನನ್ನ ಮಾವನವರಿಗೆ ಬರಬೇಡ ಎಂದು ನಾನೇ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಾವನವರಿಗೆ ಹೊಡೆದು ಬಡೆದು ಹೆದರಿಸಿ ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಬಂದರೆ ಸಹಾಯವಾಗುತ್ತದೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲು 2ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**